# ಮಾತೃಪ್ರೇಮ ಯೋಗ


❑ ಪ್ರವ್ರಾಜಿಕಾ ಶಿವಾತ್ಮಪ್ರಾಣಾ

**ತಮ್ಮ ಮಾತೃಪ್ರೇಮದಿಂದ ಮಾನವ ಜನಾಂಗವನ್ನು ಮುಗ್ಧಗೊಳಿಸಿದ ಅನುಪಮ ಬದುಕು ಮಹಾಮಾತೆ ಶ್ರೀಶಾರದಾ ದೇವಿಯವರದು. ಭೌತಿಕ ನಾಗರಿಕತೆಯ ಬೆನ್ನಟ್ಟಿ ವಿನಾಶದ ಅಂಚಿನಲ್ಲಿರುವ ಆಧುನಿಕ ಜಗತ್ತಿಗೆ ಶ್ರೀಮಾತೆಯವರು ತೋರಿದ ಮಾತೃಪ್ರೇಮದ ಸಂಜೀವಿನಿಯೇ ಸಿದ್ಧೌಷಧ ಹಾಗೂ ದಿವ್ಯೌಷಧ ಎಂದು ನಿರೂಪಿಸಿರುವ ಪ್ರವ್ರಾಜಿಕಾ ಶಿವಾತ್ಮಪ್ರಾಣಾ ಅವರು ಖೊನ್ಸಾ, ಅರುಣಾಚಲ ಪ್ರದೇಶದ ರಾಮಕೃಷ್ಣ ಶಾರದಾ ಮಿಷನ್ನಿನ ಶಾಖೆಯಲ್ಲಿ ಸೇವಾನಿರತರಾಗಿದ್ದಾರೆ.**

**ಭಾ**ರತದಲ್ಲಿ ಹಿಂದಿನಿಂದಲೂ ಸ್ತ್ರೀಯರಿಗೆ ಅತ್ಯುನ್ನತ ಸ್ಥಾನವನ್ನು ನೀಡಲಾಗಿದೆ. ಮಾತೆ, ಶ್ರೀಗುರು, ಆರಾಧ್ಯದೇವತೆ ಇತ್ಯಾದಿ ಉನ್ನತ ಪೂಜ್ಯಸ್ಥಾನಗಳಲ್ಲಿ ಸ್ತ್ರೀ ವಿರಾಜಿಸುತ್ತಿದ್ದಾಳೆ. **ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ**—"ಎಲ್ಲಿ ನಾರಿಯರು ಪೂಜಿಸಲ್ಪಡುವರೊ ಅಲ್ಲಿ ದೇವತೆಗಳು ಸಂತೋಷಿಸುತ್ತಾರೆ" ಎನ್ನುತ್ತದೆ ಸನಾತನ ಹಿಂದೂಧರ್ಮ. ಕಾರಣ, ಹಿಂದೂನಾರಿ ಕೇವಲ ನಾರಿಯಲ್ಲ—ಆಕೆ ನಾರಾಯಣಿ, ಮಾತೆ. ಪವಿತ್ರತೆ, ನಿಃಸ್ವಾರ್ಥತೆ, ತ್ಯಾಗ ಮತ್ತು ಸಕಲಜೀವಿಗಳನ್ನು ಆವರಿಸಿಕೊಳ್ಳಬಲ್ಲ ಅನುಪಮ, ಅಸೀಮ ಮಾತೃಪ್ರೇಮವೇ ಮೂರ್ತಿವೆತ್ತ ದೇವತೆ—ಹಿಂದೂ ಮಾತೆ.

ಗಾರ್ಗಿ, ಮೈತ್ರೇಯಿ, ಘೋಷಾ, ಸುಲಭಾ, ನಿವಾವರಿ, ಅನಸೂಯ, ಅರುಂಧತಿ, ಸೀತಾ, ಸಾವಿತ್ರೀ, ಅಕ್ಕಮಹಾದೇವಿಯರಂತಹ ಯೋಗಿನಿ, ಗುರು, ಬ್ರಹ್ಮಜ್ಞಾನಿ, ಪವಿತ್ರತಾ ಶಿರೋಮಣಿಯರು ಸ್ತ್ರೀಕುಲದ ಕಣ್ಮಣಿಗಳಾಗಿ ಯುಗಯುಗದಲ್ಲಿ ಜನ್ಮವೆತ್ತಿ ಜನಸಾಮಾನ್ಯರಿಗೆ ಮಾರ್ಗದರ್ಶನ ನೀಡಿರುವರು. ವೇದ, ಉಪನಿಷತ್ತು, ಬೌದ್ಧ ತ್ರಿಪಿಟಕ, ಆಗಮ, ವಚನಭಂಡಾರ ಇತ್ಯಾದಿ ಆಧ್ಯಾತ್ಮಿಕ ಸಾಹಿತ್ಯಕ್ಷೇತ್ರದಲ್ಲಿಯೂ ಈ ನಾರಿಯರ ಕೊಡುಗೆ ಅಪೂರ್ವ. ಹೀಗಾಗಿ ಇಂದಿಗೂ ಇವರುಗಳು ಜನಮನದಲ್ಲಿ ವಿರಾಜಿಸುತ್ತಿರುವರು. ಕಿತ್ತೂರು ರಾಣಿ ಚನ್ನಮ್ಮ, ಕೆಳದಿ ರಾಣಿ ಚನ್ನಮ್ಮಾಜಿ, ದುರ್ಗಾಬಾಯಿ, ಅಹಲ್ಯಾಬಾಯಿ, ಜೀಜಾಬಾಯಿ, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಮೊದಲಾದ ವೀರರಮಣಿಯರು ನಾಡಿನ ಹಿರಿಮೆಯನ್ನು ಬೆಳಗಿರುವರು. ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಇವರ ಪಾತ್ರ ಅನುಪಮವಾಗಿತ್ತು. ಇವರು ಕೇವಲ ವೀರನಾರಿಯರಾಗಿರಲಿಲ್ಲ, ಮಾತೃತ್ವದ ಸಜೀವ ಮೂರ್ತಿಗಳಾಗಿದ್ದರು. ಅಂತಲೆ ಇವರ ಮಾತೃಪ್ರೇಮ ಕೇವಲ ತಮ್ಮ ಪುತ್ರ ಪುತ್ರಿಯರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಕುಟುಂಬದ ಸಂಕುಚಿತ ಕಕ್ಷೆಯನ್ನು ಭೇದಿಸಿ ಹೊರಹೊಮ್ಮಿ, ನಾಡಿನ ಸಕಲ ಪ್ರಜೆಗಳನ್ನು ಆವರಿಸಿಕೊಂಡಿತ್ತು. ಆದ್ದರಿಂದಲೇ ಇವರು ತಮ್ಮ ನಾಡಿನ ಪ್ರಜೆಗಳನ್ನು ಉದ್ಧರಿಸಿ, ಸತ್ಪಥದಲ್ಲಿ ಕರೆದೊಯ್ಯಬಲ್ಲವರಾಗಿದ್ದರು. ಈ ನಾರಿಯರ ಸಾಧನೆಯ ಮೂಲರಹಸ್ಯ, ಮೂಲಶಕ್ತಿ ಅವರಲ್ಲಿ ಸಂಪೂರ್ಣವಾಗಿ ಜಾಗೃತವಾಗಿದ್ದ ಅನುಪಮ ಮಾತೃಶಕ್ತಿ.

ಆದರೆ ಕಾಲಚಕ್ರ ಉರುಳಿದಂತೆ ಹಲವಾರು ಕಾರಣಗಳಿಂದ ನಾರಿಯರ ಸ್ಥಿತಿ ಅಧೋಗತಿಗಿಳಿಯುತ್ತಾ ಬಂದಿದೆ. ಪೂಜ್ಯಸ್ಥಾನದಲ್ಲಿ ಆರಾಧಿಸಲ್ಪಟ್ಟ ಸ್ತ್ರೀ ಇಂದು ನಿಕೃಷ್ಟಭಾವ ಮತ್ತು ತುಚ್ಛ ಭಾವಗಳಿಗೆ ತುತ್ತಾಗಿದ್ದಾಳೆ. ತನ್ನ ಸಹಜ, ಜನ್ಮಗತ ಅನುಪಮ ಶಕ್ತಿಯ ಭಂಡಾರವಾದ ಮಾತೃಶಕ್ತಿಯನ್ನು ಮರೆತಿರುವುದೇ ಸ್ತ್ರೀಕುಲದ ಅವನತಿಯ ಮೂಲ ಕಾರಣ. ಸಕಲ ಕ್ಷೇತ್ರಗಳಲ್ಲಿ ಪುರುಷನೊಡನೆ ಸ್ಪರ್ಧಿಸಿ, ಸಮಾನಸ್ಥಾನವನ್ನು ಗಳಿಸುವಲ್ಲಿ ಸ್ತ್ರೀ ವಿಜಯಿಯಾಗಿದ್ದಾಳೇನೋ ಸರಿ. ಆದರೇನು? ಪರಿಮಳವಿಲ್ಲದ ಪುಷ್ಪದಂತೆ, ಸಾರವಿಲ್ಲದ ಫಲದಂತೆ ಆಗಿದೆ ಈ ಮಾತೃಭಾವ ವಿಹೀನ ಮಹಿಳೆಯ ಸ್ಥಿತಿ. ಇದರ ಫಲವಾಗಿ ಛಿದ್ರವಿಚ್ಛಿದ್ರ ಕುಟುಂಬಗಳು, ಬಾಲಾಪರಾಧಗಳು, ಬಟ್ಟೆಗೆಟ್ಟ ಬಾಲಕ ಬಾಲಕಿಯರು, ಗುರಿಯಿಲ್ಲದ ಯುವಜನಾಂಗ, ದುಃಖ, ದಾರಿದ್ರ್ಯ, ನೈತಿಕ, ಧಾರ್ಮಿಕ, ಆಧ್ಯಾತ್ಮಿಕ ಅಧಃಪತನ—ಇವುಗಳಿಂದ ತುಂಬಿದ ಸಮಾಜ ಕ್ಯಾನ್ಸರ್ ವ್ಯಾಧಿಗ್ರಸ್ತ ವಯೋವೃದ್ಧನಂತಾಗಿದೆ.



ಇಂತಹ ಸಮಾಜವನ್ನು ಪುನರುದ್ಧರಿಸಲು ಈ ಯುಗದ ಅವತಾರವರಿಷ್ಠರಾದ ಶ್ರೀರಾಮಕೃಷ್ಣರು ಧರೆಗಿಳಿದು ಬಂದರು. ರಶ್ಮಿಯನ್ನಗಲಿರಲಾರದ ರವಿಯಂತೆ, ಶಕ್ತಿಸ್ವರೂಪಿಣಿಯಾದ ಶ್ರೀಶಾರದಾ ಮಾತೆಯನ್ನೂ ಒಡನೆ ಕರೆತಂದರು. ಫಲಹಾರಿಣಿ ಕಾಳಿಪೂಜೆಯ

ರಾತ್ರಿ ಶ್ರೀಮಾತೆಯವರನ್ನು ಸಾಕ್ಷಾತ್ ಜಗದಂಬೆಯೆಂದು ಪೂಜಿಸುವುದರ ಮೂಲಕ **ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ** ಎಂಬ ಉಕ್ತಿಯನ್ನು ಅಕ್ಷರಶಃ ಪಾಲಿಸಿ, ಸ್ತ್ರೀಯಲ್ಲಡಗಿರುವ ಮಾತೃತ್ವದ ಹಿರಿಮೆ, ಗರಿಮೆ, ಪೂಜ್ಯತೆಯನ್ನು ಇಡೀ ಜಗತ್ತಿಗೆ ಸಾರಿದರು. ದಾರುಣವಾಗಿರುವ ಸ್ತ್ರೀಕುಲದ ಉದ್ಧಾರ ಸ್ವಯಂ ಸ್ತ್ರೀಯರಿಂದಲೇ ಸಾಧ್ಯ ಎಂಬ ಸತ್ಯವನ್ನು ಶ್ರೀರಾಮಕೃಷ್ಣರು ಅರಿತಿದ್ದರು. ಆದ್ದರಿಂದಲೇ ಸ್ತ್ರೀಜಾಗರಣೆಯ ಈ ಕಾರ್ಯವನ್ನು ಶ್ರೀಮಾತೆಯವರಿಗೆ ಹಸ್ತಾಂತರಿಸಿದರು. ಪ್ರಾರಂಭದಲ್ಲಿ ನಿರಾಕರಿಸುತ್ತಿದ್ದ ಶ್ರೀಮಾತೆಯವರು ಶ್ರೀರಾಮಕೃಷ್ಣರ ಮಹಾಸಮಾಧಿಯ ಉತ್ತರಕಾಲದಲ್ಲಿ ಮಾತೃತ್ವಜಾಗರಣೆಯ ಕಾರ್ಯಭಾರವನ್ನು ಸಂಪೂರ್ಣವಾಗಿ ನಿರ್ವಹಿಸಿಕೊಂಡರು.

ಅದೇ ರೀತಿ, ಪ್ರಾರಂಭದಲ್ಲಿ ಶಕ್ತಿಗೆ ತಲೆಬಾಗದ ಪ್ರಿಯಶಿಷ್ಯ ನರೇಂದ್ರನಾಥರಲ್ಲಿಯೂ ಶ್ರೀರಾಮಕೃಷ್ಣರು ಅದ್ಭುತ ಪರಿವರ್ತನೆಯನ್ನು ತಂದರು. ಧರ್ಮಸಂಸ್ಥಾಪನಾ ಕಾರ್ಯದಲ್ಲಿ ಮಾತೃಶಕ್ತಿಯ ಜಾಗರಣೆ ಅತ್ಯಾವಶ್ಯಕವೆಂದು ಸ್ವಾಮಿ ವಿವೇಕಾನಂದರು ಉದ್ಘೋಷಿಸುವಂತಾಯಿತು. ಅಷ್ಟೇ ಅಲ್ಲ, ಪ್ರಪ್ರಥಮವಾಗಿ ತ್ಯಾಗೀ ಸಂನ್ಯಾಸಿನಿಯರಿಗಾಗಿ ಸ್ತ್ರೀಮಠವನ್ನು ಸಂಸ್ಥಾಪಿಸಲೂ ಸ್ವಾಮೀಜಿಯವರು ಸಂಕಲ್ಪಿಸಿದರು. ತ್ಯಾಗೀ ಸ್ತ್ರೀಸೇನೆಯ ಸಂಘಟನೆಗಾಗಿ ಸ್ವದೇಶ ಮತ್ತು ವಿದೇಶಗಳಲ್ಲಿಯೂ ಯತ್ನಿಸಿದರು. ಸೋದರಿ ನಿವೇದಿತಾರಂತಹ ಸ್ತ್ರೀರತ್ನವನ್ನು ಆಗಿನ ಶತ್ರುದೇಶವಾದ ಇಂಗ್ಲೆಂಡಿನಿಂದ ಕರೆತರುವಲ್ಲಿ ಸಫಲರಾದರು. ಸ್ವದೇಶದ ನಾರೀಕುಲದ ಜಾಗರಣೆಯ ಸಲುವಾಗಿ ಸೋದರಿ ನಿವೇದಿತಾ ವಿದ್ಯಾಲಯವು ಅಸ್ತಿತ್ವಕ್ಕೆ ಬಂದಿತು. ಭವಿಷ್ಯದ ಸ್ತ್ರೀಮಠದ ಬುನಾದಿಯಾದ ಈ ವಿದ್ಯಾಲಯದ ಉದ್ಘಾಟನೆಯನ್ನು ಮಾಡಿದವರು ಶ್ರೀಮಾತೆಯೆ. ಸ್ವಾಮೀಜಿಯವರ ಜೀವಿತಾವಧಿಯಲ್ಲಿ ಸ್ತ್ರೀಮಠ ಅಧಿಕೃತವಾಗಿ ಸ್ಥಾಪನೆಯಾಗದಿದ್ದರೂ, ಅವರ ಸ್ತ್ರೀಮಠದ ಪರಿಕಲ್ಪನೆ ಒಂದು ದೃಷ್ಟಿಯಲ್ಲಿ ಶ್ರೀಮಾತೆಯವರ ಮೂಲಕವೇ ಕಾರ್ಯಗತವಾಯಿತು ಎನ್ನಬಹುದು.

ಭವಿಷ್ಯದ ಸ್ತ್ರೀಮಠದ ಸದಸ್ಯೆಯರ ಸಮ್ಮಿಲನವಾದುದು ಪ್ರಥಮವಾಗಿ ಈ ವಿದ್ಯಾಲಯದಲ್ಲಿಯೇ. ಮುಂದೆ ಶ್ರೀರಾಮಕೃಷ್ಣ ಮಠದ ಕಾರ್ಯನಿರ್ವಾಹಕರ ಸಹಾಯದಿಂದ ಈ ತ್ಯಾಗೀ ಸ್ತ್ರೀಸದಸ್ಯೆಯರನ್ನು ಒಡಗೂಡಿದ, ಸಂಪೂರ್ಣ ಸ್ವತಂತ್ರವಾದ ಶ್ರೀಶಾರದಾ ಮಠದ ಉದಯವಾಯಿತು. ಕೇವಲ ನಾರಿಯರಿಂದ, ನಾರಿಯರಿಗಾಗಿ, ನಾರೀರತ್ನ ಶ್ರೀಶಾರದಾದೇವಿಯವರ ಸುನಾಮದಿಂದ ಸುಸಂಘಟಿತವಾದ ನಾರಿಯರ ಶ್ರೀಮಠ ಈ ಶ್ರೀಶಾರದಾ ಮಠ. ಸ್ವಾಮೀಜಿಯವರ ಸುಸ್ವಪ್ನದ ಫಲವೇ ಈ ಸ್ತ್ರೀಮಠ. ಇದರ ಸಂಘಟನೆಯ ಮಹಾಶಕ್ತಿ ಮಾತೃಶಕ್ತಿ. ಶ್ರೀರಾಮಕೃಷ್ಣರ ನಿರ್ಯಾಣಾನಂತರ ಶಿಷ್ಯಸಂತಾನರೆಲ್ಲರ ಸಂಘಟನೆಗಾಗಿ ಮತ್ತು ಅವರುಗಳ ಆಹಾರ-ಆಶ್ರಯಗಳಿಗಾಗಿ ಶ್ರೀರಾಮಕೃಷ್ಣರನ್ನು ಎಡೆಬಿಡದೆ ಪ್ರಾರ್ಥಿಸಿ, ಅದನ್ನು ಕಾರ್ಯರೂಪಕ್ಕಿಳಿಸಿದುದೂ ಶ್ರೀಮಾತೆಯ ಮಾತೃಶಕ್ತಿಯೇ. ಈ ದೃಷ್ಟಿಯಲ್ಲಿ ಶ್ರೀರಾಮಕೃಷ್ಣ ಮಠ ಮತ್ತು ಶ್ರೀಶಾರದಾ ಮಠ ಈ ಉಭಯ ಸಂಘಗಳ ಜನನಿ ಶ್ರೀಮಾತೆಯವರು. ಹೀಗೆ ಮಾತೃತ್ವವನ್ನು ವಿಶ್ವಮಾತೃತ್ವದ ಮಟ್ಟಕ್ಕೇರಿಸಿದ್ದಷ್ಟೇ ಅಲ್ಲ, ದೈವತ್ವದ ಸ್ತರಕ್ಕೂ ಏರಿಸಿ, ಆಧ್ಯಾತ್ಮಿಕ ಪ್ರಪಂಚದಲ್ಲಿ ಮಾತೃಪ್ರೇಮದ ಮಹಾಶಕ್ತಿಯನ್ನು ಪ್ರಕಟಗೊಳಿಸಲೆಂದೇ ಈ ಸಂಘಜನನಿ ಶ್ರೀಮಾತೆಯವರ ಅವತಾರದ ಆವಶ್ಯಕತೆಯುಂಟಾಯಿತು.

ಬಾಲ್ಯಜೀವನದಿಂದ ಮೊದಲಾಗಿ ಅಂತ್ಯಲೀಲೆಯವರೆಗೂ ಶ್ರೀಶಾರದಾಮಾತೆಯವರ ಜೀವನದಲ್ಲಿ ಘಟಿಸಿದ ಹಲವಾರು ಅದ್ಭುತ ಘಟನೆಗಳು ಅವರು ಸಾಕ್ಷಾತ್ ವಿಶ್ವಜನನಿಯ ಅವತಾರವೆಂಬ ಸಂಗತಿಯನ್ನು ಸಮರ್ಥಿಸುತ್ತವೆ. ಬಾಲ್ಯಕಾಲದಿಂದಲೇ ದೈನಂದಿನ ಜೀವನದಲ್ಲಿ ಶ್ರೀಮಾತೆಯವರ ಮಾತೃಪ್ರೇಮದ ಹರಿವು ಅವರ ಕುಟುಂಬದ ಸದಸ್ಯರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಜಯರಾಮಬಾಟಿ ಗ್ರಾಮದ ಹಿರಿಯ, ಕಿರಿಯ, ಧನಿ, ಧನಹೀನ, ಉಚ್ಚಕುಲದವರು, ನೀಚಕುಲದವರು, ಪಾಪಿ-ತಾಪಿಗಳೆಲ್ಲರ ಮೇಲೆ ಅವರ ಮಾತೃಪ್ರೇಮದ ಸುಧಾಧಾರೆ ನಿರಂತರವಾಗಿ ಪ್ರವಹಿಸುತ್ತಿತ್ತು. ಮರಿಕೋಗಿಲೆಗೆ ಕುಹೂ ಕುಹೂ ಕೂಗನ್ನು ಕಲಿಸಬೇಕೇ? ಧವಳ ಪೂರ್ಣಿಮೆಯ ಶಶಿಯ ಬೆಳದಿಂಗಳ ಹಾಲಿನ ಧಾರೆಗಾಗಿ ಸೆರಗೊಡ್ಡಿ ಬೇಡಬೇಕೇ? ವಸಂತ ಋತುವಿನ ಬಾಲರವಿಯು ತನ್ನ ನವಿರಾದ ಸಾಸಿರ ಕಿರಣಗಳ ಶುಭಹಸ್ತವನ್ನು ಅವರಿವರೆನ್ನದೆ ಸಕಲರ ಶಿರದ ಮೇಲೆ ಮಮತೆಯಿಂದ ಸವರುವಂತೆ ಶ್ರೀಮಾತೆಯವರ ಮಾತೃಪ್ರೇಮ ಸಹಜವಾಗಿದ್ದಿತು. "ಬೆಳೆವ ಸಸಿಯ ಗುಣ ಮೊಳಕೆಯಲ್ಲಿ" ಎಂಬ ಗಾದೆಯಂತೆ ಈ ವಿಶ್ವಜನನಿಯಲ್ಲಿ ಮಾತೃತ್ವ ಸಹಜವೂ ಜನ್ಮಸಿದ್ಧವೂ ಆಗಿತ್ತು. ಪರರಿಂದ ಕಲಿತ, ಬೆಳೆಸಿಕೊಂಡ ಅಥವಾ ಇತರ ಸಾಧಕರಂತೆ ಸಾಧನೆಯಿಂದ ಗಳಿಸಿಕೊಂಡ ಪ್ರೇಮವಲ್ಲ ಅದು. ಅವರೆಂದೂ ಭಾವುಕರಾಗಿ ಕಣ್ಣೀರಿಡಲಿಲ್ಲ, ಆರ್ತನಾದದಿಂದ ಕರೆಯಲಿಲ್ಲ. ಕಂಡಕಂಡ ದೇವರನ್ನು ಕಾಡಿ ಮಾತೃಪ್ರೇಮದ ಭಿಕ್ಷೆಯನ್ನು ಬೇಡಲಿಲ್ಲ. ಅವರ ಮಾತೃಭಾವ ಜನ್ಮಗತವಾಗಿತ್ತು. ಅವರು ಸ್ನಿಗ್ಧ, ಗಾಂಭೀರ್ಯಪೂರ್ಣ, ಜೀವಂತ ಪ್ರೇಮಘನಮೂರ್ತಿಯಾಗಿದ್ದರು. ಯತಿಯಾಗಿದ್ದ ಸ್ವಾಮಿ ಶಾರದಾನಂದರನ್ನೂ ಡಕಾಯಿತನಾದ ಅಸಾಧು ಅಮ್‌ಜದ್‌ನನ್ನೂ ಸಮಾನದೃಷ್ಟಿಯಿಂದ ಕಾಣಬಲ್ಲ ವಿಶ್ವಮಾತೃಪ್ರೇಮದ ಪ್ರಜ್ಞೆ ಅವರಲ್ಲಿ ಸದಾ ಜಾಗೃತವಾಗಿತ್ತು.

ಅಸಂಖ್ಯ ಅವತಾರಗಳನ್ನು ಈ ವಿಶ್ವ ವೀಕ್ಷಿಸಿದೆ. ಈ ಎಲ್ಲ ಅವತಾರಗಳು ಒಂದೊಂದು ಯುಗದಲ್ಲಿ ಅವತರಿಸಿ, ಧರ್ಮದ ಸಂಸ್ಥಾಪನೆಗಾಗಿ ಮತ್ತು ಉನ್ನತಿಗಾಗಿ ತಮ್ಮದೇ ಆದ ಆಧ್ಯಾತ್ಮಿಕ ಸಾಧನೆಯ ಪ್ರಣಾಲಿಗಳನ್ನು ಜಗತ್ತಿಗೆ ನೀಡುತ್ತಿವೆ. ಬುದ್ಧ, ಕ್ರಿಸ್ತ, ಪೈಗಂಬರ ಮೊದಲಾದವರು ನಿರ್ವಾಣ ಪದವಿಯ ಅಥವಾ ದೈವೀ ಸಾಕ್ಷಾತ್ಕಾರದ ಸ್ವಾನುಭೂತಿಯನ್ನು ತಮ್ಮ ನೂತನ ಧರ್ಮಗಳ ಬುನಾದಿಯನ್ನಾಗಿ ಮಾಡಿದರು. ಶಂಕರ, ರಾಮಾನುಜ,

ಮಧ್ವ, ಶ್ರೀರಾಮಕೃಷ್ಣ, ವಿವೇಕಾನಂದ ಮೊದಲಾದವರು ವೇದ, ಉಪನಿಷತ್ತು, ಆಗಮ, ಭಗವದ್ಗೀತೆಗಳ ಅಮರತತ್ತ್ವಗಳ ಮೇಲೆ ನೂತನ ಬೆಳಕನ್ನು ಚೆಲ್ಲಿ, ನವೀನ ವ್ಯಾಖ್ಯಾನವನ್ನು ನೀಡಿ, ದೈನಂದಿನ ಜೀವನದಲ್ಲಿ ಅವುಗಳನ್ನು ಓತಪ್ರೋತವಾಗಿ ಅಳವಡಿಸಿಕೊಳ್ಳುವ ಮಾರ್ಗವನ್ನು ತೋರಿಸಿದರು. ಸಾಧಾರಣವಾಗಿ ಇವರೆಲ್ಲರೂ ತಮ್ಮ ತಮ್ಮ ಶಿಷ್ಯವೃಂದಕ್ಕೆ, ಭಕ್ತ-ಬೆಂಬಲಿಗರಿಗೆ ಅಧ್ಯಾತ್ಮಜೀವನದ ಸಫಲತೆಗಾಗಿ ಒಂದಲ್ಲ ಒಂದು ಯೋಗ ಮಾರ್ಗದ ಅಭ್ಯಾಸದ ಆವಶ್ಯಕತೆಯನ್ನು ಒತ್ತಿಹೇಳಿದರು; ಜಪ, ಧ್ಯಾನ, ಯಮ-ನಿಯಮ ಇತ್ಯಾದಿಗಳನ್ನು ದಿನನಿತ್ಯ ನಿಯಮಿತವಾಗಿ ಪಾಲಿಸಬೇಕೆಂದು ಬೋಧಿಸಿದರು. ವಿವೇಕ, ವೈರಾಗ್ಯ ಇತ್ಯಾದಿ ಸಾಧನ ಚತುಷ್ಟಯಗಳನ್ನು ಸಾಧಕರ ಅರ್ಹತೆಗಳನ್ನಾಗಿ ವಿಧಿಸಿದರು.

ಆದರೆ ಇಂದಿನ ವೈಜ್ಞಾನಿಕ ಯುಗದ ಮಾನವರು ತೀವ್ರಗತಿ ಮತ್ತು ತೀವ್ರತಮ ಒತ್ತಡಗಳಿಂದ ತುಂಬಿದ ತಮ್ಮ ದೈನಂದಿನ ಜೀವನದಲ್ಲಿ ಈ ವಿಧಿನಿಯಮಗಳನ್ನು ಪಾಲಿಸಿ, ಧಾರ್ಮಿಕ ಜೀವನವನ್ನು ನಡೆಸಲು ಸಾಧ್ಯವೇ? ಜಪ, ತಪ, ಧ್ಯಾನಗಳೆಂದರೆ ಮೂಗುಮುರಿಯುವ ಜನಾಂಗವನ್ನು ಮರಳಿ ಮನೆಗೆ ಕರೆತರಬಲ್ಲವರಾರು? ಆಧ್ಯಾತ್ಮಿಕ ವಿಧಿ-ನಿಯಮಗಳಿಗೆ ಬದ್ಧರಾಗಲು ಒಲ್ಲದ "ಸ್ವಾಧೀನತಾಪ್ರಿಯ" ಶಿಶುಗಳಿಗೆ ಸತ್ಯಸ್ವಾತಂತ್ರ್ಯದ ದಾರಿಯನ್ನು ತೋರುವವರಾರು? ಭಕ್ತಿ, ಪೂಜೆ, ಪಾರಾಯಣ, ಸಂಸ್ಕೃತಿ, ಧರ್ಮವೆಂದರೆ ಛೀ ಗುಟ್ಟುವ ಆಧುನಿಕ ಜನಾಂಗದ ಹೃದಯವನ್ನು ಪರಿವರ್ತಿಸಿ, ಅಧೋಗತಿಯ ಪಾತಾಳದಿಂದ ಉದ್ಧರಿಸುವವರಾರು? ಭಕ್ತಿ, ಜ್ಞಾನ, ಧ್ಯಾನ ಇತ್ಯಾದಿಗಳು ಯಾವ ದಾರುಣ ಸನ್ನಿವೇಶದಲ್ಲಿ ವಿಫಲವಾದುವೋ, ನಿಷ್ಫಲವಾದುವೋ, ಅಲ್ಲಿ ವಿಜಯಪತಾಕೆಯನ್ನೆತ್ತಿ ನಿಂತಿತು ಮಾತೃಪ್ರೇಮದ ಸಂಜೀವಿನಿ.

ಗುಪ್ತಯೋಗಿನಿ, ಸುಜ್ಞಾನಿ, ಸರಸ್ವತಿ, ಬಹುಕುಶಲಮತಿ ಶ್ರೀಶಾರದಾಮಾತೆಯವರು ಪತಿತ ಮಾನವಜನಾಂಗವನ್ನು ತಮ್ಮ ಮಾತೃಪ್ರೇಮದಿಂದ ಮುಗ್ಧಗೊಳಿಸಿ, ಅವರುಗಳ ಬರಡು ಹೃದಯದಲ್ಲಿ ಪ್ರೇಮದ ಸೆಲೆಯನ್ನು ಹೊರಹೊಮ್ಮಿಸಿ, ಕೈಹಿಡಿದು ಅವರುಗಳನ್ನು ಸತ್ಪಥದಲ್ಲಿ ಕರೆದೊಯ್ಯುವಲ್ಲಿ ಯಶಸ್ವಿಯಾದರು. ತನ್ನ ಸಂತಾನಗಳ ಮನಸ್ಸಿಗೆ ಒಗ್ಗುವ ಅತಿ ಸುಲಭ ಹಾಗೂ ಸಹಜ ಮಾರ್ಗವನ್ನು ಸಾಧನಾ ಪ್ರಣಾಲಿಯಾಗಿ ನೀಡುವಲ್ಲಿ ವಿಜಯಿಯಾದುದು ಅವರ ಅನುಪಮ ಮಾತೃಶಕ್ತಿ. ನಾಲ್ಕು ವೇದಗಳು, ಹಲವು ಉಪನಿಷತ್ತುಗಳು, ಎರಡು ಮಹಾಕಾವ್ಯಗಳು, ಹದಿನೆಂಟು ಪುರಾಣಗಳು, ಆಗಮಗಳು, ಭಗವದ್ಗೀತೆ, ಬೈಬಲ್, ಖುರಾನ್, ಬೌದ್ಧ ತ್ರಿಪಿಟಕಗಳು ಇತ್ಯಾದಿ ಸಹಸ್ರ ಸಹಸ್ರ ಧರ್ಮಗ್ರಂಥಗಳ ಸಾರವನ್ನು ಕೇವಲ ಒಂದೇ ಒಂದು ಅನುಪಮ, ಮಹತ್ವಪೂರ್ಣ ಮತ್ತು ಬಹುಪರಿಣಾಮಕಾರಿ ಭಾವಭಂಡಾರವಾದ 'ಮಾತೃಪ್ರೇಮ'ದಲ್ಲಿ ಅಡಗಿಸಿ, ಅದನ್ನು ದೈನಂದಿನ ಜೀವನದಲ್ಲಿ ಸಾಧಿಸುವ ಮಾರ್ಗವನ್ನು ತಮ್ಮ ಜೀವನದ ಮೂಲಕವೇ ನೇರವಾಗಿ ತೋರಿಸಲು ಅವತಾರವೆತ್ತಿ ಬಂದವರು ಶ್ರೀಮಾತೆಯವರು.

'ಯುಜ್' ಮೂಲ ಧಾತುವಿನಿಂದ ಹೊರಬಂದ ಪದ ಯೋಗ. ಜೀವಾತ್ಮನನ್ನು ಪರಮಾತ್ಮನೊಡನೆ ಒಂದುಗೂಡಿಸುವ ಸಾಧನಾಪಥವೇ ಯೋಗ. ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗ, ಧ್ಯಾನಯೋಗ ಇತ್ಯಾದಿ ಯೋಗಗಳ ದ್ವಾರಾ ಸಾಧಕರು ಈ ಐಕ್ಯತೆಯನ್ನು ಸಾಧಿಸಬಹುದು. ಅದೇ ರೀತಿ, ಮಾತೃಪ್ರೇಮವನ್ನು ಯೋಗದ ಉಚ್ಚ ಸ್ತರಕ್ಕೆ ಏರಿಸಿ, ನಿಜಜೀವನದಲ್ಲಿ ಪ್ರಯೋಗಿಸಿ, ಈ ಐಕ್ಯತೆಯನ್ನು ಸಾಧಿಸಿದವರು ಶ್ರೀಮಾತೆ. ಜನಸಾಮಾನ್ಯರೂ ತಮ್ಮ ದೈನಂದಿನ ಜೀವನ ಯಾತ್ರೆಯಲ್ಲಿಯೇ ಅತ್ಯಂತ ಸಹಜವಾಗಿ ಸಾಧಿಸಿ, ಅಧ್ಯಾತ್ಮ ಜೀವನದಲ್ಲಿ ಸಫಲತೆಯನ್ನು ಪಡೆಯಬಹುದಾದ ನೂತನ ಯೋಗ—ಮಾತೃಪ್ರೇಮ ಯೋಗ—ಶ್ರೀಮಾತೆಯವರು ವಿಶ್ವಕ್ಕೆ ನೀಡಿದ ಅಪೂರ್ವ ಕೊಡುಗೆ.

ಬಾಲಗೋಪಾಲನನ್ನು ವಾತ್ಸಲ್ಯಭಾವದಿಂದ ಆರಾಧಿಸಿ ಸಾಕ್ಷಾತ್ಕಾರವನ್ನು ಪಡೆದುಕೊಂಡ ಯಶೋದಾಮಾತೆಯ ಸಾಧನೆ ವೈಯಕ್ತಿಕ ಸಾಧನೆ. ಈ ಬಾಲಗೋಪಾಲನನ್ನು ಸಕಲ ಜಡ, ಜಂತು, ಸ್ಥಾವರ-ಜಂಗಮ, ಪಶು-ಪಕ್ಷಿ ಪ್ರಾಣಿಗಳಲ್ಲಿ, ಸಕಲ ಮಾನವರಲ್ಲಿ ಗುರುತಿಸಿ, ವಾತ್ಸಲ್ಯಭಾವದಿಂದ ಸಕಲರನ್ನು ತನ್ನ ಮಾತೃಪ್ರೇಮದ ಮಡಿಲಲ್ಲಿ ಇರಿಸಿಕೊಂಡ ಜಗಜ್ಜನನಿ ಶ್ರೀಮಾತೆ. ವಾತ್ಸಲ್ಯಭಾವವನ್ನು ಮಾತೃಪ್ರೇಮ ಯೋಗದಲ್ಲಿ ಪರಿಣತಿಗೊಳಿಸಿದ ಮಹಾಯೋಗಿನಿ ಶ್ರೀಶಾರದಾ. ಭೌತಿಕ ಜಗತ್ತಿನ ಜನನಿ ಯಾವ ಪ್ರಮಾಣದಲ್ಲಿ ತನ್ನ ಶಿಶುವನ್ನು ಪ್ರೇಮಿಸಬಲ್ಲಳೋ, ಶಿಶುವಿಗಾಗಿ ತನ್ನ ಜೀವನವನ್ನು ಮೀಸಲಾಗಿಡಬಲ್ಲಳೋ, ಅದಕ್ಕಿಂತ ಅತ್ಯಧಿಕ ಪ್ರಮಾಣದಲ್ಲಿ ಮತ್ತು ಶ್ರೇಷ್ಠ ಮಟ್ಟದಲ್ಲಿ ಆಧ್ಯಾತ್ಮಿಕ ಜಗತ್ತಿನ ಜನನಿಯಾದ ಶ್ರೀಮಾತೆ ಸಕಲರನ್ನು ತನ್ನ ಮಾತೃಹೃದಯದಲ್ಲಿ ಆಶ್ರಿತರನ್ನಾಗಿ ಇರಿಸಿಕೊಂಡಿದ್ದರು. ಭೌತಿಕ ಜಗತ್ತಿನ ಜನನಿಯ ಪ್ರೇಮದಲ್ಲಿ ಒಂದು ವೇಳೆ ಸ್ವಾರ್ಥದ ಒಂದು ಕಣ ಇರಲೂಬಹುದು. ಆದರೆ ಈ ಆಧ್ಯಾತ್ಮಿಕ ಜನನಿಯ ಪ್ರೇಮದಲ್ಲಿ ಸ್ವಾರ್ಥತೆ ಅಥವಾ ನ್ಯೂನತೆಗಳನ್ನು ಅರಸುವುದು—ಮೊಸರಲ್ಲಿ ಕಲ್ಲನ್ನು ಅರಸುವಂತೆ; ಶಶಿಯಲ್ಲಿ ತಾಪವನ್ನು ಅನುಭವಿಸುವಂತೆ; ಅಮೃತದಲ್ಲಿ ಗರಲದ ರುಚಿ ನೋಡುವಂತೆ ಅಸಾಧ್ಯ.

ಆದರೆ ಅವರ ಮಾತೃಪ್ರೇಮವು ಭಾವುಕತೆಯ ಮರಳಿನ ಬುನಾದಿಯ ಮೇಲೆ ನಿಂತದ್ದಲ್ಲ. ಅದ್ವೈತಭಾವದ ಪ್ರಖರ ದಿವ್ಯಜ್ಞಾನದ ದೃಢ ಅಸ್ತಿಭಾರದ ಮೇಲೆ ನಿಂತ ಯೋಗಶಿಖರ ಅವರ ಮಾತೃಪ್ರೇಮ ಯೋಗ. ಅದ್ವೈತಭಾವದ ಜ್ಞಾನಚಕ್ಷು ಅವರಲ್ಲಿ ಬಾಲ್ಯಕಾಲದಿಂದಲೆ ಉನ್ಮೀಲನವಾಗಿತ್ತು. ಈ ಪರಿಪೂರ್ಣ ದಿವ್ಯಜ್ಞಾನವು ಅವರ ಮಾತೃಪ್ರೇಮದ ಹೃದಯ ಸರೋವರದಲ್ಲಿ ಅಂತರ್ಗತವಾಗಿತ್ತು. ಹೀಗೆ ದಿವ್ಯಜ್ಞಾನ ಮತ್ತು ದಿವ್ಯಪ್ರೇಮಗಳ ಸಂಯೋಗದ ಫಲವೇ ಶ್ರೀಮಾತೆಯವರ ಮಾತೃಪ್ರೇಮ ಯೋಗ. ಈ ಯೋಗವನ್ನು ಅವರು ದೈನಂದಿನ ಕಾರ್ಯಗಳಿಂದ ಬೇರೆಯಾಗಿ ಕಾಣಲಿಲ್ಲ. ಅವರ ದಿನನಿತ್ಯದ ಪ್ರತಿಯೊಂದು ಕಾರ್ಯ, ವ್ಯವಹಾರ, ಮಾತುಕತೆ, ಭಾವಗಳೊಂದಿಗೆ ಅದು ಓತಪ್ರೋತ

ವಾಗಿತ್ತು. ಹೀಗೆ ಅದು ಜ್ಞಾನ, ಪ್ರೇಮ ಮತ್ತು ಕರ್ಮಗಳ ಸಮನ್ವಯವಾಗಿತ್ತು.

ಈ ಯೋಗಮಾರ್ಗವನ್ನು ಸಾಧನಾಪಥವನ್ನಾಗಿ ಕೈಗೊಳ್ಳ ಲಿಚ್ಛಿಸುವವರಿಗೆ ಲಿಂಗಭೇದ, ಜಾತಿಭೇದ, ವಯೋಭೇದ, ದೇಶಭೇದ ಕಾಲಭೇದಗಳಿಲ್ಲ. ಈ ಯೋಗ ಕೇವಲ ಸ್ತ್ರೀಯರ ಆಜನ್ಮ ಸಿದ್ಧ ಹಕ್ಕು; ಅದು ಅವರಿಗೇ ಮೀಸಲು ಎಂಬುದು ಪ್ರಮಾದಪೂರ್ಣ ಅಭಿಪ್ರಾಯ. ಸಕಲ ಸ್ತ್ರೀಪುರುಷರು ತಮ್ಮ ಭಾವನೆಗಳ ಕೋಶವಾಗಿರುವ ಹೃದಯಕ್ಕೆ ಪರಿಪೂರ್ಣವೂ ಭೌತಿಕತೆಯನ್ನು ಮೀರಿರುವುದೂ ಆದ ಮಾತೃಪ್ರೇಮದ ದಿವ್ಯಸಂಸ್ಕಾರವನ್ನು ನೀಡಿ, ಮಾತೃಪ್ರೇಮಭರಿತ ಹೃದಯವನ್ನಾಗಿ ಪರಿವರ್ತಿಸಿಕೊಳ್ಳಲು ಸಾಧ್ಯ. ಆಗ ಸಕಲಜೀವಿಗಳು 'ತನ್ನವೇ', 'ತನ್ನ ಸಂತಾನವೇ' ಮತ್ತು ಅಂತ್ಯದಲ್ಲಿ ಏಕಮೇವಾದ್ವಿತೀಯ ಎಂಬ ನೂತನ ದಿವ್ಯಾನುಭೂತಿ ಉಂಟಾಗುವುದು. ಈ ಸ್ವಾನು ಭೂತಿಯನ್ನು ಮರೆತ ಮಾನವನನ್ನು, ಈ ಮಾತೃಪ್ರೇಮ ಯೋಗ ದೈವತ್ವದ ಸ್ತರಕ್ಕೆ ಸಹಜವಾಗಿ ಒಯ್ಯುತ್ತದೆ,.

ಐನ್‌ಸ್ಟೈನ್‌ರ $E = mc^2$ ಒಂದು ಕಿರಿದಾದ ಸಮೀಕರಣ. ಆದರೇನು, ಅದು ಅಣುವಿನೊಳಗೆ ಸುಪ್ತವಾಗಿ ಅಡಗಿರುವ ಅಪಾರಶಕ್ತಿಯ ಬಿಡುಗಡೆಗೆ ನಾಂದಿಯಾಯಿತು. ಇಡೀ ವಿಶ್ವವನ್ನು ತನ್ನ ಕಿರುಬೆರಳಿನ ಅಂಕಿತದಲ್ಲಿ ಇರಿಸಿಕೊಳ್ಳಬಲ್ಲ ಅಪರಿಮಿತ ಬಲ ಈ ಅಣುಶಕ್ತಿಗಿದೆ. ಹಾಗೆಯೇ ಮಾತೃಪ್ರೇಮ ಯೋಗವೂ ಸಹ. ಹೊರನೋಟಕ್ಕೆ ಇದು ಅತೀ ಸಾಮಾನ್ಯ ಸಾಧನಾಪ್ರಣಾಲಿ ಎಂದೆನಿಸಬಹುದು. ಆದರೆ ಇದರ ಸಾಧನೆಯ ಮೂಲಕ ವ್ಯಕ್ತಿಯ ಅಸಂಖ್ಯಾತ ಜನ್ಮಗಳ ಅಜ್ಞಾನ, ಅರಿಷಡ್ವರ್ಗ ಇತ್ಯಾದಿ ಜೀವ ವ್ಯಾಧಿಗಳು ನಾಶವಾಗಿ ಅಂತರಂಗದಲ್ಲಿ ಸುಪ್ತವಾಗಿರುವ ಅಪಾರ ದೈವೀಶಕ್ತಿಯು ಜಾಗೃತವಾಗುವುದು. ಇದೇ ಮಾತೃಪ್ರೇಮ ಯೋಗದ ರಹಸ್ಯ ಮತ್ತು ಅದರ ಶ್ರೇಷ್ಠತೆ. ಅಶಾಂತಿ, ಮಾನಸಿಕ ಒತ್ತಡ, ವ್ಯಷ್ಟಿಗತ ತುಮುಲಗಳು, ಸಮಷ್ಟಿಗತ ಕೋಲಾಹಲಗಳು ಇತ್ಯಾದಿ ಸರ್ವವ್ಯಾಧಿಗಳಿಂದ ಜರ್ಝರಿತವಾಗುತ್ತಿರುವ ವೈಜ್ಞಾನಿಕ ಯುಗದ ಜನಾಂಗದ ಉದ್ಧಾರಕ್ಕೆ ಮಾತೃಪ್ರೇಮ ಯೋಗದ ಸಿದ್ಧೌಷಧ ಮತ್ತು ದಿವ್ಯೌಷಧವೇ ಶ್ರೀಮಾತೆಯವರ ಅಪೂರ್ವ ಕೊಡುಗೆ.

## ಭಕ್ತ ಸೊನೆಗಾರ ನರಹರಿ

ಸೊನೆಗಾರ ನರಹರಿ ಪಂಡರಾಪುರವಾಸಿ; ಕಟ್ಟಾ ಶಿವಭಕ್ತ. ಪಂಡರಾಪುರದ ಅಧಿದೇವತೆಯಾದ ವಿಠಲನ ದೇವಸ್ಥಾನವನ್ನು ಪ್ರವೇಶಿಸಲು, ಅವನ ಶಿವಭಕ್ತಿ ಅಡ್ಡಿಯಾಗಿತ್ತು. ನೆರೆಹೊರೆಯವರಿಗೆಲ್ಲ, ಅಂಥ ಭಕ್ತ ಅಷ್ಟು ಹರಿದ್ವೇಷಿಯಾಗಿರುವುದು ದುರ್ದೈವ ವೆನಿಸಿತ್ತು. ಅವನನ್ನು ವಿಠಲನ ದೇವಸ್ಥಾನಕ್ಕೆ ಹೋಗಿಬಾರೆಂದು ಹೇಳುವ ಧೈರ್ಯ ಯಾರಿಗೂ ಇರಲಿಲ್ಲ! ನರಹರಿ ನುರಿತ ಸೊನೆ ಗಾರನಾಗಿದ್ದ. ಒಂದು ಸಾರಿ ಧನಿಕನೊಬ್ಬನಿಗೆ, ವಿಠಲನಿಗೆ ಬಂಗಾರದ ಸೊಂಟಪಟ್ಟಿಯನ್ನು ಮಾಡಿಸುವ ಮನಸ್ಸಾಯಿತು. ನರ ಹರಿಯ ಬಳಿ ಬಂದು ಮಾಡಿಕೊಡಲು ಕೇಳಿದ. ನರಹರಿ ಒಪ್ಪಿದ. ಆದರೆ ಒಂದು ಷರತ್ತು: ವಿಗ್ರಹದ ಸೊಂಟದ ಅಳತೆಯನ್ನು ಧನಿಕನೇ ಒದಗಿಸಬೇಕು. ತಾನಂತೂ ಅಲ್ಲಿಗೆ ಹೋಗುವುದಿಲ್ಲ. ನಿರುಪಾಯನಾಗಿ ಧನಿಕನೇ ಅಳತೆ ತಂದ. ನರಹರಿಯು ಹೇಳಿದಂತೆ ಸಮಯಕ್ಕೆ ಸರಿಯಾಗಿ ಆಭರಣ ಮಾಡಿಕೊಟ್ಟ. ಪೂಜಾರಿ ವಿಗ್ರಹಕ್ಕೆ ಸೊಂಟಪಟ್ಟಿ ತೊಡಿಸಲು ಹೋದಾಗ ಅದು ಚಿಕ್ಕದಾಗಿ ಕಂಡಿತು. ವಾಪಸು ತಂದ ಆಭರಣವನ್ನು ನರಹರಿ ಮತ್ತೆ ಸರಿಮಾಡಿಕೊಟ್ಟ. ಈ ಬಾರಿ ಅದು ಉದ್ದವಾಗಿ ಕಂಡಿತು. ಈ ರೀತಿ ದೇವವಿಗ್ರಹದ ಸೊಂಟದ ಅಳತೆಯನ್ನು ಅದೆಷ್ಟು ಬಾರಿ ಅಳತೆ, ಮರು-ಅಳತೆ ಮಾಡಲಾಯಿತೆಂದರೆ ಸರಿಯಾದ ಅಳತೆಯನ್ನು ಮಾಡುವವರು ಪಂಡರಾಪುರದಲ್ಲಿಯೇ ಇಲ್ಲವೇನೋ ಎನ್ನಿಸಿತು.

ಹತಾಶನಾದ ಧನಿಕ, ನರಹರಿಯನ್ನೇ ಅಳತೆ ತೆಗೆದುಕೊಳ್ಳಲು ಬೇಡಿಕೊಂಡ. ಆದರೆ ಆತನನ್ನು ಅಷ್ಟು ಸುಲಭವಾಗಿ ಒಪ್ಪಿಸ ಲಾದೀತೆ? ಈ ಹಠವಾದಿಯನ್ನು ಒಪ್ಪಿಸಲು, ಸೂಕ್ತ ಉಪಾಯವೊಂದು ಹೊಳೆಯಿತು ಧನಿಕನಿಗೆ : ಅದರಂತೆ ನರಹರಿಯ ನಿಷ್ಠೆಯೂ ಭಂಗಹೊಂದಬೇಕಾಗಿಲ್ಲ. ಆತ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಹೋಗಿ ವಿಗ್ರಹದ ಸೊಂಟದ ಅಳತೆ ತೆಗೆದುಕೊಂಡ ರಾಯಿತು! ತನ್ನ ಧಾರ್ಮಿಕ ನಿಷ್ಠೆಯ ಬಗ್ಗೆ ಅಷ್ಟು ಕಠೋರ ಸ್ವಭಾವದವನಾದರೂ ನರಹರಿ ಒಪ್ಪಿದನು.

ಅಂತೂ, ಕಣ್ಣಿಗೆ ಬಟ್ಟೆ ಕಟ್ಟಿಕೊಂಡ ನರಹರಿ ವಿಠಲನ ದೇವಸ್ಥಾನದ ಗರ್ಭಗುಡಿಗೆ ಬಂದು ವಿಗ್ರಹದ ಎದುರು ನಿಂತ. ಅಳತೆ ತೆಗೆದುಕೊಳ್ಳಲು ಎರಡೂ ಕೈಗಳಿಂದ ವಿಗ್ರಹದ ಸೊಂಟವನ್ನು ಬಳಸಿದ. ಕೆಳಗೆ ಹರಿದ ಜಲಧಾರೆಯಿಂದ ಆ ಭಾಗ ತೇವವಾಗಿ ತಂಪಾಗಿದೆಯೆನ್ನಿಸಿತು. ಚಕಿತನಾದ ನರಹರಿ ಸ್ವಲ್ಪ ಮೇಲೆ ಕೈ ಆಡಿಸಿದಾಗ, ರುದ್ರಾಕ್ಷಿ ಸರ ಸ್ಪರ್ಶಿಸಿದ ಅನುಭವವಾಯಿತು. ಕೈಗಳು ಮುಂದುವರಿದು ವಿಗ್ರಹದ ಮೇಲ್ಭಾಗಕ್ಕೆ ಹೋದಾಗ, ತಲೆಯಲ್ಲಿ ಜಟೆ ಇರುವ ಅನುಭವ. ಹಣೆಯ ಮಧ್ಯದಲ್ಲಿ ಮೂರನೆ ಕಣ್ಣು. ಎಲ್ಲ ಶಿವಮಯ! ಇನ್ನು ತಡೆಯಲಾರದೆ, ನರಹರಿ ಕಣ್ಣಿಗೆ ಕಟ್ಟಿದ್ದ ಬಟ್ಟೆ ಬಿಚ್ಚಿ ನೋಡಿದರೆ—ಪಾಂಡುರಂಗ ವಿಠಲನ ವಿಗ್ರಹ ಜೀವಂತವಾಗಿ ಮಂದಹಾಸದಿಂದ ಇವನತ್ತ ನೋಡುತ್ತಿದೆ! ತಕ್ಷಣ ಕಣ್ಣಿಗೆ ಬಟ್ಟೆ ಕಟ್ಟಿಕೊಂಡ ಈ ಶಿವಭಕ್ತ. ಮತ್ತೆ ವಿಗ್ರಹ ತಡ ಕಾಡಿದರೆ, ಅದೇ ಶಿವನ ವಿಗ್ರಹ ಸ್ಪರ್ಶಿಸಿದ ಅನುಭವ. ಕಣ್ಣು ತೆರೆದು ನೋಡಿದರೆ, ಯಥಾಪ್ರಕಾರ ತುಂಟನಗೆ ಬೀರುತ್ತಿರುವ ವಿಠಲ! ಒಂದಲ್ಲ, ಎರಡಲ್ಲ, ಮೂರುಸಾರಿ ಈ ರೀತಿ ಆಯಿತು.

ಈಗ, ನರಹರಿಯ ಒಳಗಣ್ಣಿಗೆ ಕವಿದಿದ್ದ ಕತ್ತಲೆ ಕಳೆಯಿತು. "ಒಂದೇ ದೇವರೇ ವೈಷ್ಣವರಿಂದ ವಿಷ್ಣುವೆಂದೂ, ಶೈವರಿಂದ ಶಿವನೆಂದೂ ಕರೆಯಲ್ಪಡುತ್ತಾನೆ. ಓ ವಿಠಲ, ನನ್ನನ್ನೂ ನಿನ್ನವನನ್ನಾಗಿ ಸ್ವೀಕರಿಸು" ಎಂದು ಬೇಡುತ್ತಾ, ವಿನೀತನಾಗಿ, ಮಂದಹಾಸ ಬೀರುತ್ತಿದ್ದ ಭಗವಂತನ ಪಾದಗಳಿಗೆ ಅಡ್ಡಬಿದ್ದ. ಈ ರೀತಿ ಅಳೆಯಲಾಗದ ಭಗವಂತನನ್ನು ಅಳೆಯಲು ಪ್ರಯತ್ನಿಸಿದ ನರಹರಿ ಸಂತ ಜ್ಞಾನೇಶ್ವರರ (೧೨೭೫-೧೨೯೬) ಸಮಕಾಲೀನ.

(ಸಂಗ್ರಹ : ಎಸ್. ಗೋಪಿನಾಥ್)